# ಸಂನ್ಯಾಸದ ಆದರ್ಶ

**ಸಂ**ನ್ಯಾಸವೆಂಬ ಪದವು ಅನೇಕರಲ್ಲಿ ಭಯವನ್ನು ಹುಟ್ಟಿಸುತ್ತದೆ. ತಾಯಂದಿರು ಮಕ್ಕಳನ್ನು "ಸಂನ್ಯಾಸಿಗಳಿಗೆ ಕೊಟ್ಟುಬಿಡುತ್ತೇನೆ" ಎಂದು ಹೆದರಿಸುವುದೂ ಉಂಟು. ಸಾವಿರಾರು ವರ್ಷಗಳಿಂದ ಭಾರತದಲ್ಲಿರುವ ಈ ಸಂಪ್ರದಾಯದ ಬಗ್ಗೆ ಜನಸಾಮಾನ್ಯರಿಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದೇ ಇದಕ್ಕೆ ಕಾರಣ. ಸಂನ್ಯಾಸವೆಂದಾಕ್ಷಣ ಎಲ್ಲವನ್ನೂ ತ್ಯಜಿಸಿ, ಎಲ್ಲ ಸಂಪರ್ಕಗಳಿಂದಲೂ ದೂರ ಉಳಿದು ಪ್ರಿಯವಾದುದನ್ನೆಲ್ಲ ಕಳೆದುಕೊಳ್ಳಬೇಕೆಂಬ ಭಯವೂ ಇದಕ್ಕೆ ಕಾರಣ. ಸಂನ್ಯಾಸ ಪದದ ಅರ್ಥವೇ ಹಾಗಿದೆ—**ಸಮ್ಯಕ್ ನ್ಯಾಸ**—ಸಂಪೂರ್ಣ ತ್ಯಾಗ ಅಥವಾ ಎಲ್ಲದರ ತ್ಯಾಗ. ಸಂನ್ಯಾಸಿಯು ಏಕಾಕಿ, ನಿರಾವಲಂಬಿಯಾಗಿರಬೇಕು, ಆತ್ಮನಿರ್ಭರತೆಯನ್ನು ಪಡೆದುಕೊಂಡು ಭಗವಂತನಲ್ಲಿ ನೆಲೆನಿಂತಿರಬೇಕು ಎಂದು ಶ್ರೀಶಂಕರಾಚಾರ್ಯರು ಗೀತೆಯನ್ನು ವಿವರಿಸುವಾಗ ಹೇಳುತ್ತಾರೆ. ಅದ್ದರಿಂದಲೇ ಸಂನ್ಯಾಸಿಯಾದವರು ಸಮಾಜದ ಪರಿಸರದಿಂದ ದೂರವಾಗಿ ಕಾಡುಗಳಲ್ಲಿ, ಪರ್ವತಪ್ರದೇಶಗಳಲ್ಲಿ, ಇರುತ್ತಿದ್ದರು. ಸಂನ್ಯಾಸಿಯ ಮತ್ತೊಂದು ಹೆಸರು **ಅತ್ಯಾಶ್ರಮೀ**—ವರ್ಣಾಶ್ರಮ ವ್ಯವಸ್ಥೆಯ ಕಡೆಯ ಹಂತವನ್ನು ಸ್ವೀಕರಿಸಿರುವವನು ಅಥವಾ ಆ ವ್ಯವಸ್ಥೆಯನ್ನು ಮೀರಿದವನು. ಈ ರಹಸ್ಯಮಯ ಜೀವನಶೈಲಿಯೇ ಭಯ, ಶಂಕೆಗಳಿಗೆ ಕಾರಣವಾಗಿದೆ. ಸಂನ್ಯಾಸದ ಹಿರಿಮೆಯನ್ನು ತಿಳಿಯಬೇಕಾದರೆ ಆ ಸಂಪ್ರದಾಯದ ಸಂಪೂರ್ಣ ಪರಿಚಯ ಆವಶ್ಯಕ.

## ಸಂನ್ಯಾಸಿ ಏಕಾಂಗಿ

ಬಹಳ ಹಿಂದಿನಿಂದಲೂ, ಪ್ರತಿಯೊಂದು ಜನಾಂಗದಲ್ಲೂ, ಪ್ರತಿಯೊಂದು ಸಮಾಜದಲ್ಲೂ, ಎಲ್ಲರೂ ನಡೆಸುವ ಲೌಕಿಕ ಜೀವನವನ್ನು ಬಯಸದ, ಪ್ರಾಪಂಚಿಕ ಸುಖಭೋಗಗಳಿಗೆ ವಿಮುಖರಾದ ವ್ಯಕ್ತಿಗಳು ಇದ್ದರು, ಇಂದಿಗೂ ಇದ್ದಾರೆ. ಯಾವ ಪ್ರೇರಣೆಯಿಂದ ಇವರು ಇಂತಹ ಬದುಕನ್ನು ಬಯಸುತ್ತಾರೆ ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಬಾಲ್ಯದಿಂದಲೇ ಇಂತಹ ವಿಷಯ ವಿಮುಖತೆ ಇರುತ್ತದೆ ಎಂದೂ ಹೇಳಲಾಗುವುದಿಲ್ಲ. ಜೀವನದ ಯಾವುದೋ ಒಂದು ಸಮಯದಲ್ಲಿ ಇದು ಕಾಣಿಸಿಕೊಂಡು, ಇಡೀ ಜೀವನದ ಗತಿಯನ್ನೇ ಬದಲಾಯಿಸಿಬಿಡುತ್ತದೆ. ಇವರನ್ನು ಸಮಾಜ 'ವಿಚಿತ್ರ' ಎಂದು ಕರೆಯಬಹುದು. ಹಾಗೆ ನೋಡಿದರೆ ಸಾಮಾನ್ಯತೆಯನ್ನು ಮೀರಲು ಪ್ರಯತ್ನಿಸುವ ಎಲ್ಲರನ್ನೂ ಸಮಾಜ ವಿಚಿತ್ರ ವ್ಯಕ್ತಿಗಳೆಂದೇ ಗುರುತಿಸುತ್ತದೆ. ಅಸಾಮಾನ್ಯತೆಯನ್ನು ವಿರೋಧದ ಹಾದಿಯ ಮೂಲಕವೇ ಗೆದ್ದುಕೊಳ್ಳಬೇಕು ಎಂದು ವಿಶೇಷತೆಯನ್ನು ಕಂಡುಕೊಂಡ ಪ್ರತಿಯೊಬ್ಬರೂ ಹೇಳಿದ್ದಾರೆ. ಪ್ರಾಪಂಚಿಕ ಸೆಳೆತಕ್ಕೆ ಸಿಲುಕದೆ, ಅದರ ವಿರುದ್ಧ ಈಜಲು ಪ್ರಯತ್ನಿಸುವ ಸಂನ್ಯಾಸಿಯನ್ನು ಕಂಡು ಕೆಲವರು ಭಾವಿಸುತ್ತಾರೆ, "ಇವರೇಕೆ ಹೀಗೆ?" ಮತ್ತೆ ಕೆಲವರು ಉಪೇಕ್ಷೆಯನ್ನು ತೋರಿದರೆ, ಎಲ್ಲೋ ಕೆಲವರು ಶ್ರದ್ಧೆ, ಗೌರವಗಳಿಂದ ಅವರ ಬಳಿ ಸಾರುತ್ತಾರೆ. ಜನಸಂಪರ್ಕವನ್ನು ಬಯಸದೆ ಏಕಾಕಿತನವನ್ನು ಅಭ್ಯಾಸ ಮಾಡುವುದರ ಮೂಲಕ ಪ್ರತ್ಯೇಕತೆಯನ್ನು ರೂಢಿಸಿಕೊಳ್ಳುವ ಸಂನ್ಯಾಸಿ ನಿಗೂಢನಾಗಿಯೇ ಉಳಿಯುತ್ತಾನೆ. ಕಾಡಿನಲ್ಲೋ, ಗುಹೆಯಲ್ಲೋ, ಪರ್ವತಪ್ರದೇಶದಲ್ಲೋ ನೆಲೆಸಿ ಏಕಾಂತ ಜೀವನವನ್ನು ಅವನು ನಡೆಸಬೇಕು ಎಂಬುದೇ ಆದರ್ಶ. ಆದರೆ ಎಲ್ಲಕ್ಕಿಂತ ಮಿಗಿಲಾಗಿ ಅವನ ಅಂತರಂಗದಲ್ಲಿ ಯಾವುದೇ ಸಂಗವನ್ನು ಬಯಸದ ಏಕಾಂತಭಾವ ಮೂಡಬೇಕು. ಬಾಹ್ಯದ ಪರಿಸರ ಅದಕ್ಕೆ ಪೋಷಕವಷ್ಟೆ. ಒಬ್ಬ ವ್ಯಕ್ತಿ ಏಕಾಂತದಲ್ಲಿದ್ದರೂ ಇತರ ವ್ಯಕ್ತಿಗಳಿಗೆ, ವಸ್ತುಗಳಿಗೆ, ಭಾವನೆಗಳಿಗೆ, ಚಟಗಳಿಗೆ ಅಂಟಿಕೊಂಡಿರಬಹುದು. ಈ ರೀತಿಯ ಕೊಂಡಿಗಳನ್ನೆಲ್ಲ ಕಳಚಿಹಾಕಿ, ಭಗವಂತನಲ್ಲಿ ನಿರ್ಭರತೆಯನ್ನು ಪಡೆದುಕೊಂಡಾಗ, ಆತ್ಮನಲ್ಲಿ ಸ್ಥಿರವಾಗಿ ನೆಲೆನಿಂತಾಗ ಮಾತ್ರ ನಿಜವಾದ ಏಕಾಂತ ಸಾಧ್ಯವಾಗುವುದು. ಇದೇ ಸಂನ್ಯಾಸಿಯ ಲಕ್ಷಣ.

ಸಂನ್ಯಾಸಿ ಏಕಾಂಗಿಯಾಗಿರಬೇಕು ಎಂದಾದರೆ ಮಠಗಳು, ಆಶ್ರಮಗಳು, ಸಂಘಗಳಿವೆಯಲ್ಲ ಎಂಬ ಪ್ರಶ್ನೆ ಬರುವುದು ಸಹಜ. ಏಕಾಂಗಿಯಾಗಿದ್ದ ಸಂನ್ಯಾಸಿಗಳನ್ನು ಒಂದುಗೂಡಿಸಿ ಸಂಘವನ್ನು ಪ್ರಾರಂಭ ಮಾಡಿದ್ದು ಭಗವಾನ್ ಬುದ್ಧ. ಅದಕ್ಕೂ ಮೊದಲು ಸಂನ್ಯಾಸಿಗಳನ್ನು ಮುನಿ, ಯತಿ, ಶ್ರಮಣ ಎಂದು ಕರೆಯಲಾಗುತ್ತಿತ್ತು. ಜೈನರು ತಮ್ಮ ಧರ್ಮದ ವಿರಾಗಿಗಳನ್ನು ಮುನಿಗಳೆಂದು ಕರೆಯುತ್ತಾರೆ. **ಬೌದ್ಧರು**, ಶ್ರಮಣ ಹಾಗೂ ಭಿಕ್ಷು ಎಂದು ಕರೆಯುತ್ತಾರೆ. **ಹಿಂದೂಗಳು** ಸಂನ್ಯಾಸಿ, ಸ್ವಾಮಿ ಎಂದು ಕರೆಯುತ್ತಾರೆ. **ಸ್ವಾಮಿ** ಎಂದರೆ ಇಂದ್ರಿಯಗಳ ಮೇಲೆ, ತನ್ನ ಮೇಲೆ **ಹತೋಟಿಯುಳ್ಳವನು** ಎಂದರ್ಥ. ಬುದ್ಧನ ನಂತರ

ಶಂಕರಾಚಾರ್ಯರು ಸಂನ್ಯಾಸಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ಹಿಂದೂ ಧರ್ಮದ ಪಾಲನೆ, ಪೋಷಣೆಗಳ ಜವಾಬ್ದಾರಿಯನ್ನು ಮಠಗಳಿಗೆ ಒಪ್ಪಿಸಿದರು. ಇದರಿಂದ ಗುರು ಪರಂಪರೆ ಪ್ರಾರಂಭವಾಯಿತು. ಈಗಿರುವ ಸಂನ್ಯಾಸ ಸಂಪ್ರದಾಯಗಳೆಲ್ಲವೂ ಶಂಕರರು ಹಾಕಿಕೊಟ್ಟ ನಿಯಮಗಳನ್ನೇ ಅನುಸರಿಸುತ್ತವೆ. ವೈಷ್ಣವ ಸಂಪ್ರದಾಯ, ರಾಮಾಯತ ಸಂಪ್ರದಾಯಗಳೂ ಕೂಡ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾತ್ರ ಮಾಡಿಕೊಂಡಿವೆ. ವೈಷ್ಣವ ಸಂಪ್ರದಾಯಗಳು ಭಕ್ತಿಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡುತ್ತವೆ.

### ಜೀವನದ ಪರಿವರ್ತನೆ

ಜೀವನದ ಪಯಣದಲ್ಲಿ ಪ್ರತಿಯೊಬ್ಬರೂ ಏಕಾಕಿಯೇ! ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಂಗಡಿಗರು, ಬಂಧುಗಳು ಸೂಕ್ತ ಸಲಹೆ ನೀಡಬಲ್ಲರು. ಮತ್ತೆ ಕೆಲವರು ಸಮಸ್ಯೆಗಳಿಗೆ ಕಾರಣರೂ ಆಗಬಹುದು. ಜೀವನದ ಹೋರಾಟವನ್ನು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮನೋಸಾಮರ್ಥ್ಯದ ಬಲದಿಂದ ಗೆಲ್ಲಬೇಕು. ಜೀವನವನ್ನು ಕುರಿತು ಅನೇಕ ಪ್ರಶ್ನೆಗಳನ್ನು ನಾವು ಒಮ್ಮೆಯಾದರೂ ಕೇಳಿಕೊಂಡಿರುತ್ತೇವೆ. "ಈ ಜೀವನದ ಅರ್ಥವೇನು? ಸಾವೆಂದರೇನು? ಸಾವಿನೊಂದಿಗೆ ಎಲ್ಲವೂ ಮುಗಿದು ಹೋಗುವುದೇ? ನನಗೂ ಇತರರಿಗೂ ಇರುವ ಸಂಬಂಧವೇನು? ನಾನು ಎಂದರೆ ಯಾರು?"—ಇಂತಹ ಪ್ರಶ್ನೆಗಳು ಎದ್ದಾಗ, ವಿಚಾರ, ಚಿಂತನಗಳು ಮನಸ್ಸಿನಲ್ಲಿ ಪ್ರಾರಂಭವಾದಾಗ, ಶಾಸ್ತ್ರಗಳು, ಸ್ನೇಹಿತರು, ಹಿರಿಯರು ಏನೇ ಉತ್ತರವನ್ನು ಹೇಳುತ್ತಿದ್ದರೂ, ಇದಕ್ಕೆ ಉತ್ತರವನ್ನು "ನಾನೇ ಕಂಡುಕೊಳ್ಳಬೇಕು" ಎನ್ನುವ ಭಾವನೆ ಹೊಮ್ಮುತ್ತದೆ. "ನನ್ನ ಅನುಭವಕ್ಕೆ ಬಂದಾಗ ಮಾತ್ರ ಈ ಸಂಶಯಗಳೆಲ್ಲ ದೂರವಾಗುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಬೇಕು" ಎಂಬ ನಿರ್ಧಾರ ತಾಳಿದಾಗ ಸತ್ಯಾನ್ವೇಷಣೆ ಪ್ರಾರಂಭವಾಗುತ್ತದೆ. ಇಂತಹ ಭಾವನೆ ಹಿಂದಿನ ಜನ್ಮಗಳ ಸಂಸ್ಕಾರಗಳಿಂದ ಜಾಗೃತವಾಗಬಹುದು ಅಥವಾ ಯಾವುದೋ ಒಂದು ಅಹಿತಕರ ಘಟನೆಯಿಂದ, ಅತೀವ ದುಃಖದಿಂದ ಮನಸ್ಸು ಬಾಹ್ಯ ಜಗತ್ತಿನಿಂದ ವಿಮುಖವಾಗಿ ನೆಮ್ಮದಿಯನ್ನು ಅರಸುತ್ತ, ತತ್ತ್ವಚಿಂತನೆ ಪ್ರಾರಂಭಿಸಿ ಅದು ಸಂನ್ಯಾಸದಲ್ಲಿ ಪರಿಣಮಿಸಬಹುದು. ಗುರುವಿನ ಉಪದೇಶ, ಸ್ನೇಹಿತನ ಹಿತನುಡಿ, ಶಾಸ್ತ್ರಗಳ ಅಧ್ಯಯನದಿಂದಲೂ ಸಂನ್ಯಾಸದ ಬಗ್ಗೆ ಒಲವು ಮೂಡಬಹುದು. ರಮಣ ಮಹರ್ಷಿಗಳಿಗೆ ಸಾವಿನ ಅನುಭವ ವೈರಾಗ್ಯಕ್ಕೆ ಕಾರಣವಾದರೆ, ಹೆಂಡತಿಯ ಮಾತುಗಳು ತುಳಸೀದಾಸರ ಕಣ್ತೆರೆದವು. "ವಾಸನೆಗಳನ್ನು ಸುಟ್ಟುಹಾಕು" ಎಂಬ ಅಗಸನೊಬ್ಬನ ಮಾಮೂಲಿ ಮಾತು ಬಂಗಾಳದ ಪ್ರಸಿದ್ಧ ಧನಿಕ ಲಾಲಾ ಬಾಬುವನ್ನು ಎಚ್ಚರಿಸಿಬಿಟ್ಟಿತು. ವಾಸನಾ ಎಂಬ ಪದಕ್ಕೆ ಬಂಗಾಳಿಯಲ್ಲಿ ಎರಡು ಅರ್ಥಗಳಿವೆ: ಬಾಳೆಯಗಿಡದ ತೊಗಟೆ ಎಂದು ಒಂದರ್ಥ. ಅವುಗಳನ್ನು ಒಣಗಿಸಿ ಅಗಸರು ಬೆಂಕಿಗೆ ಇಂಧನವಾಗಿ ಬಳಸುತ್ತಾರೆ. ಸಂಸ್ಕಾರಗಳು, ಬಯಕೆಗಳು ಎಂಬುದು ಮತ್ತೊಂದರ್ಥ. ಎರಡನೇ ಅರ್ಥವು ಲಾಲಾ ಬಾಬುವಿನಲ್ಲಿ ಆಧ್ಯಾತ್ಮಿಕ ಜಾಗೃತಿಯನ್ನು ಉಂಟುಮಾಡಿತು. ಶ್ರೀರಾಮಕೃಷ್ಣರ ನೇರಶಿಷ್ಯ ಗೋಪಾಲ್ ದಾ ಹೆಂಡತಿಯ ತೀರಿಕೊಂಡಿದ್ದ ದುಃಖವನ್ನು ತಡೆಯಲಾರದೆ, ಸಾಂತ್ವನಕ್ಕಾಗಿ ಗುರುವಿನ ಬಳಿ ಬಂದರು. ಅವರ ಆಧ್ಯಾತ್ಮಿಕ ನಿಲುವಿನಿಂದ ಪರಿವರ್ತನೆಗೊಂಡು ವೈರಾಗ್ಯದಲ್ಲಿ ನೆಲೆನಿಂತು ಉತ್ತಮ ಸಂನ್ಯಾಸಿಯಾದರು. ಮತ್ತೊಬ್ಬ ನೇರಶಿಷ್ಯ ಶಾರದಾಪ್ರಸನ್ನ ತನ್ನ ಕಳೆದುಹೋದ ಬಂಗಾರದ ಕೈಗಡಿಯಾರಕ್ಕಾಗಿ ದುಃಖ ಪಡುತ್ತ ಶ್ರೀರಾಮಕೃಷ್ಣರಲ್ಲಿಗೆ ಬಂದ. ಅದೇ ಸಂನ್ಯಾಸ ಜೀವನಕ್ಕೆ ನಾಂದಿಯಾಯಿತು. ಭಕ್ತಿಯು ಪಕ್ವವಾಗಿ, ಭಗವಂತನನ್ನು ಬಿಟ್ಟು ನನ್ನವರಾರೂ ಇಲ್ಲ ಎಂಬ ಭಾವನೆಯುಂಟಾಗಿ, ಬೇರೆ ಎಲ್ಲ ಆಸಕ್ತಿಗಳೂ ಕ್ಷೀಣಿಸಿದಾಗಲೂ ವೈರಾಗ್ಯ ಮೂಡುತ್ತದೆ. ಅಕ್ಕ ಮಹಾದೇವಿ, ಮೀರಾಬಾಯಿ, ಕಬೀರದಾಸ ಇವರೆಲ್ಲ ಇದಕ್ಕೆ ನಿದರ್ಶನ; ಅಪ್ಪಟವಾದ ಭಕ್ತಿಯಿಂದ ಅವರು ತ್ಯಾಗದ ಜೀವನವನ್ನು ಬಯಸಿದವರು. ವಿಧ್ಯುಕ್ತವಾಗಿ ಸಂನ್ಯಾಸವನ್ನು ಸ್ವೀಕರಿಸದಿದ್ದರೂ ಆಚರಣೆಯಲ್ಲಿ ಸಂನ್ಯಾಸಿಗಳಾಗಿ ಬಾಳಿದವರು.

### ಆಂತರಿಕ ಸಂನ್ಯಾಸ

ಸಂನ್ಯಾಸದ ಅರ್ಹತೆಗೆ ಅಂತರ್ ಸಂನ್ಯಾಸವೇ ಮುಖ್ಯವಾದದ್ದು. ಸಾಮಾನ್ಯವಾಗಿ ಆಂತರಿಕ ಸಂನ್ಯಾಸವನ್ನು ಬಯಸುವವರು, ಪಡೆದುಕೊಂಡಿರುವವರು ಬಾಹ್ಯ ಸಂನ್ಯಾಸವನ್ನು ಸ್ವೀಕರಿಸುತ್ತಾರೆ. ಬಾಹ್ಯ ಸಂನ್ಯಾಸದಲ್ಲಿ ವ್ಯಕ್ತಿಯು ಕಾವಿಯನ್ನು ಧರಿಸಿ, ಮುಂಡನವನ್ನು ಮಾಡಿಸಿಕೊಂಡು, ದಂಡ-ಕಮಂಡಲುಗಳನ್ನು ಧರಿಸಿರುತ್ತಾನೆ. ಇಂತಹ ವ್ಯಕ್ತಿಯನ್ನು ಸಂನ್ಯಾಸಿ ಎಂದು ಎಲ್ಲರೂ ಗುರುತಿಸಬಲ್ಲರು. ಎಲ್ಲವನ್ನೂ ಸುಟ್ಟು ಭಸ್ಮ ಮಾಡುವ ಬೆಂಕಿಯ ಸಂಕೇತ ಕಾವಿಬಟ್ಟೆ. ಅದನ್ನು ಧರಿಸಿದವನು ಬಾಹ್ಯ ಆಕರ್ಷಣೆಗಳನ್ನು ಸುಟ್ಟು ಹಾಕಿರುವ ವ್ಯಕ್ತಿಯೆಂದು ಇದು ಸೂಚಿಸುತ್ತದೆ. ಸಮವಸ್ತ್ರ ಧರಿಸಿರುವವನನ್ನು ಆಯಾ ಸಂಸ್ಥೆಯೊಂದಿಗೆ ಗುರುತಿಸುವಂತೆ ದೇವರಿಗೆ ತನ್ನ ಜೀವನವನ್ನು ಮೀಸಲಿಟ್ಟಿರುವವರನ್ನು ಕಾವಿ ಸೂಚಿಸುತ್ತದೆ. ಪ್ರಾಪಂಚಿಕ ದೃಷ್ಟಿಯಿಂದ ಅಂತಹ ವ್ಯಕ್ತಿಯನ್ನು ಇತರರು ನೋಡಬಾರದು ಎಂಬುದೂ ಈ ಪದ್ಧತಿಯ ಉದ್ದೇಶ. ಆಂತರಿಕ ಸಂನ್ಯಾಸವನ್ನು ಹೊಂದಿರುವಂತಹ ವ್ಯಕ್ತಿ ಗೃಹಸ್ಥನೇ ಆಗಿರಬಹುದು. ಆತನ ನಡತೆ, ಭಗವದ್ಭಕ್ತಿಗಳಿಂದ ಮಾತ್ರ ಆ ವೈರಾಗ್ಯ ವ್ಯಕ್ತವಾಗುತ್ತದೆ.

ಶ್ರೀರಾಮಕೃಷ್ಣರು ಹೇಳುತ್ತಾರೆ, "ಸಂಸಾರ ಆಶ್ರಮದ ಜ್ಞಾನಿ, ಸಂನ್ಯಾಸಾಶ್ರಮದ ಜ್ಞಾನಿ, ಇವರಿಗೆ ದೊರಕುವ ಜ್ಞಾನದಲ್ಲಿ ಏನಾದರೂ ತಾರತಮ್ಯವಿದೆಯೆ ಎಂದು ನೀವು ಕೇಳಬಹುದು. ಉತ್ತರ 'ಇಲ್ಲ' ಅಂತ. ಇಬ್ಬರದೂ ಒಂದೇ ತರದ್ದು. ಇಬ್ಬರೂ ಜ್ಞಾನಿಗಳೆ; ಇಬ್ಬರಿಗೂ ಒಂದೇ ತರದ ಅನುಭವ" (ವಚನ ವೇದ ಭಾಗ ೨; ಪು.೪೫೨). ಸಂನ್ಯಾಸಿಗೆ ಇರಬೇಕಾದದ್ದು ಅಂತರ್ ತ್ಯಾಗವೆಂಬುದನ್ನು ಸ್ಪಷ್ಟಪಡಿಸುತ್ತ ಹೇಳುತ್ತಾರೆ: "ಅತಿ ಮುಖ್ಯವಾದದ್ದು ಮಾನಸಿಕತ್ಯಾಗ. ಅದು ದೊರೆತುಬಿಟ್ಟರೆ ಸಂನ್ಯಾಸಿಯಾದಂತೆಯೆ. ಆದರೆ ನಮ್ಮ ವಾಸನೆಗಳಿಗೆಲ್ಲ ಬೆಂಕಿ ಇಡಬೇಕಾಗುತ್ತದೆ. ಆಗ ಮಾತ್ರವೇ ಸಾಧ್ಯ" (ವಚನ ವೇದ ಭಾಗ ೨; ಪು. ೫೭೧).

ಮಾನಸಿಕ ತ್ಯಾಗವನ್ನು ಪಡೆದಿದ್ದೇವೆ ಎಂದು ತೀರ್ಮಾನಿಸುವುದು ಹೇಗೆ? ನಮ್ಮ ಮನಸ್ಸೇ ಇದಕ್ಕೆ ಸಾಕ್ಷಿ; ಬೇರೆ ಯಾರೂ ನಮ್ಮ ಅಂತರಂಗವನ್ನು ತಿಳಿಯಲಾರರು. ನಮ್ಮನ್ನು ನಾವೇ ವಂಚಿಸಿಕೊಂಡು, ಹೊರಗಿನ ಪ್ರಪಂಚಕ್ಕೆ ತೋರಿಕೆಯ ವೈರಾಗ್ಯವನ್ನು ಮೆರೆದರೆ ಕೆಲವು ದಿನಗಳ ಕಾಲ ಅಂಥ ನಾಟಕ ಚೆನ್ನಾಗಿ ನಡೆಯಬಹುದು. ಆದರೆ ಆಧ್ಯಾತ್ಮಿಕ ಜೀವನದಲ್ಲಿ ಸುಳ್ಳು, ವಂಚನೆ, ಕಪಟಗಳಿಗೆ ಆಸ್ಪದವಿಲ್ಲ. ಇಂತಹ ವ್ಯಕ್ತಿಗಳು ಸತ್ಯದಿಂದ ದೂರವೇ ಉಳಿದು ತಮ್ಮ ಕೇಡನ್ನು ತಾವೇ ತಂದುಕೊಳ್ಳುತ್ತಾರೆ. ಸರ್ಪಭೂಷಣ ಶಿವ ಯೋಗಿಗಳ ಮಾತು ಈ ಭಾವನೆಯನ್ನು ಪುನರುಚ್ಚರಿಸು ವಂತಿದೆ:

ಜನಕಂಜಿ ನಡೆಕೊಂಡರೇನುಂಟು ಲೋಕದಿ,
ಮನಕಂಜಿ ನಡೆಕೊಂಬುದೇ ಚಂದ ।
ಜನರೇನ ಬಲ್ಲರು ಒಳಗಾಗೋ ಕೃತ್ಯವ,
ಮನವರಿಯದ ಕಳ್ಳತನವಿಲ್ಲವಲ್ಲ ॥

ಹಾಗಾದರೆ ಮಾನಸಿಕ ತ್ಯಾಗವನ್ನು ಬೆಳೆಸಿಕೊಳ್ಳುವುದು ಹೇಗೆ? ತಾತ್ಕಾಲಿಕವಾದ ಭಾವೋದ್ವೇಗದಿಂದ ವೈರಾಗ್ಯ ಸಿದ್ಧಿಸು ವುದಿಲ್ಲ. ವೈರಾಗ್ಯದ ಬಗ್ಗೆ ಮಾತನಾಡುತ್ತ ಶ್ರೀರಾಮಕೃಷ್ಣರು 'ಮ'ನನ್ನು ಕೇಳುತ್ತಾರೆ, "ವೈರಾಗ್ಯ ಅಂದರೆ ಏನು ಹೇಳು ನೋಡೋಣ?" ಮಾಸ್ಟರ್ ಉತ್ತರಿಸುತ್ತಾನೆ, "ವೈರಾಗ್ಯವೆಂದರೆ ಕೇವಲ ಸಂಸಾರದ ಮೇಲಿನ ವಿರಾಗವಲ್ಲ. ಭಗವಂತನ ಕಡೆ ಅನುರಾಗ; ಸಂಸಾರದ ಕಡೆ ವಿರಾಗ." (ವಚನವೇದ ಭಾಗ ೧, ಪು. ೫೫೫). ಶ್ರೀರಾಮಕೃಷ್ಣರು ಈ ಉತ್ತರವನ್ನು ಮೆಚ್ಚು ತ್ತಾರೆ. ವೈರಾಗ್ಯದೊಂದಿಗೆ ಭಗವಂತನಲ್ಲಿ ಅನುರಾಗವಿದ್ದರೆ ಅಥವಾ ಜ್ಞಾನನಿಷ್ಠೆಯಿಂದ ಸಾಧಿಸಿದ ಆತ್ಮಜ್ಞಾನವಿದ್ದರೆ ಮಾತ್ರ ಅದು ನಿಜವಾದ ಸಂನ್ಯಾಸವಾಗುತ್ತದೆ. ನಾಣ್ಯದ ಎರಡು ಮುಖಗಳಂತೆ ಇದು. ಕೇವಲ ಬಾಹ್ಯಸಂನ್ಯಾಸವಿದ್ದರೆ ಆದರ್ಶಕ್ಕೆ ಚ್ಯುತಿ ತಂದಂತಾಗುವುದು. ಸಂನ್ಯಾಸದ ಆದರ್ಶವು ಬಹಳ ಕಠಿಣ ಹಾಗೂ ಕಠೋರ. ಫಿಲೋಕಾಲಿಯಾದಲ್ಲಿ ಬರುವ ಸಂತ ಸೈಮನ್‌ನ ಮಾತುಗಳು ಹೀಗಿವೆ, "ಯಾರು ಜಗತ್ತನ್ನು ತಿರಸ್ಕರಿಸಲು ಪ್ರಯತ್ನಿಸುತ್ತಿರುವರೋ ಅವರು ತಮ್ಮ ಅಂತರಾಳದಿಂದ ಭಗವಂತನನ್ನು ಪ್ರೀತಿಸಲೇಬೇಕು ಹಾಗೂ ಸದಾಕಾಲ ಅವನನ್ನು ಸ್ಮರಿಸುವುದನ್ನು ಅಭ್ಯಾಸ ಮಾಡಬೇಕು. ಇದಲ್ಲದೆ ಬೇರೆ ಯಾವುದೂ ಅವನು ಪ್ರಾಪಂಚಿಕ ವಸ್ತುಗಳನ್ನು ಹೇಸಿಗೆಯಂತೆ ತಿರಸ್ಕರಿಸಿ ಎಲ್ಲ ವನ್ನೂ ತ್ಯಾಗಮಾಡುವಂತೆ ಮಾಡಲಾರವು." ವೈರಾಗ್ಯವನ್ನು ಕೃತಕವಾಗಿ ರೂಢಿಸಿಕೊಳ್ಳುವುದು ಸಾಧ್ಯವಿಲ್ಲ. ಅದು ಒಳಗಿ ನಿಂದ ಸ್ವಾಭಾವಿಕವಾಗಿ ಮೂಡಿಬರಬೇಕು. ಬಾಹ್ಯ ವಸ್ತುಗಳಲ್ಲಿ, ವ್ಯಕ್ತಿಗಳಲ್ಲಿ ಎಲ್ಲಿಯ ತನಕ ನಮಗೆ ಮಮತೆಯಿರುವುದೋ ಅಲ್ಲಿಯ ತನಕ ವೈರಾಗ್ಯ ಮೂಡಲಾರದು. ಸಾಧನೆಯಿಂದ ಹಾಗೂ ಬಾಹ್ಯ ಸಂನ್ಯಾಸದಿಂದ ಅಂತರಂಗದಲ್ಲಿ ಮೂಡಿದ ವೈರಾಗ್ಯವನ್ನು ದೃಢಪಡಿಸಿಕೊಳ್ಳಲು ಸಾಧ್ಯವಿದೆ.

ತ್ಯಾಗವೆಂದರೆ ಏನು? ಪ್ರಿಯವಾದುದನ್ನೆಲ್ಲ ಬಿಟ್ಟು ಸಂನ್ಯಾಸಿ ದುಃಖಮಯ ಜೀವನವನ್ನು ನಡೆಸುವನೇ? ಯಾವುದು ಲೌಕಿಕರಿಗೆ ಪ್ರಿಯವೋ, ಅದರಲ್ಲಿ ಸಂನ್ಯಾಸಿಯು ರುಚಿಯನ್ನು ಕಾಣುವುದಿಲ್ಲ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಕೆಳಗಿನದನ್ನು ತ್ಯಜಿಸಿದರೆ ಮೇಲಿನದು ದೊರಕು ವುದು. ಸಮಾಜದ ತಳಹದಿ ನೀತಿಯಲ್ಲವೆ? ಮದುವೆ ಎಂದರೆ ಏನು? ವ್ಯಭಿಚಾರವನ್ನು ತ್ಯಜಿಸುವುದು ತಾನೇ! ಕಾಡುಜನರು ಮದುವೆಯಾಗುವುದಿಲ್ಲ. ಮನುಷ್ಯ ತ್ಯಾಗ ಮಾಡುವುದರಿಂದ ಮದುವೆಯಾಗುವನು. ತ್ಯಾಗ ಮಾಡು, ತ್ಯಾಗ ಮಾಡು! ತ್ಯಾಗ, ಬರೀ ಬಿಡುವುದು, ಶೂನ್ಯಕ್ಕಾಗಿ ಅಲ್ಲ. ಏನನ್ನೂ ಪಡೆಯದೆ ಬಿಡಲಾಗುವುದಿಲ್ಲ" (ಕೃತಿಶ್ರೇಣಿ ಸಂ.೬ ಪು. ೨೧೨).

ಬಾಹ್ಯ ತ್ಯಾಗವು ಆಂತರಿಕ ಪೂರ್ಣತೆಯಿಂದ ಹೊಮ್ಮ ಬೇಕು. ಇಲ್ಲದಿದ್ದಲ್ಲಿ ಅದು ತಾತ್ಕಾಲಿಕವೂ, ದುಃಖ ದಾಯಕವೂ, ಮಾನಸಿಕ ಒತ್ತಡದಿಂದ ಕೂಡಿದ್ದೂ ಆಗಿರುತ್ತದೆ. ಪ್ರಾಪಂಚಿಕ ಆಸಕ್ತಿ ಮತ್ತು ವೈರಾಗ್ಯ ಇವು ಭಿನ್ನ ಸ್ವಭಾವ ಗಳಾದ್ದರಿಂದ ಒಬ್ಬ ವ್ಯಕ್ತಿಯಲ್ಲಿ ಒಟ್ಟಿಗೆ ಇರಲಾರವು. "ದೇವರಿರುವ ಎಡೆ ಬೇರೇನೂ ಇಲ್ಲ. ಎಲ್ಲಿ ಪ್ರಪಂಚ ಇರುವುದೋ ಅಲ್ಲಿ ದೇವರಿಲ್ಲ. ಇವೆರಡೂ ಎಂದಿಗೂ ಒಟ್ಟಿಗೆ ಸೇರಲಾರವು, ಕತ್ತಲೆ ಬೆಳಕಿನಂತೆ. ಕ್ರೈಸ್ತರ ಧರ್ಮ ಮತ್ತು ಕ್ರಿಸ್ತನ ಜೀವನದಿಂದ ನಾನು ಕಲಿತಿರುವುದು ಇದು. ಇದು ಬೌದ್ಧ ಧರ್ಮವಲ್ಲವೆ? ಇದು ಹಿಂದೂಧರ್ಮವಲ್ಲವೆ? ಇದು ಮಹಮ್ಮದೀಯ ಧರ್ಮವಲ್ಲವೆ? ಎಲ್ಲಾ ಗುರುಗಳೂ ಮಹಾತ್ಮರೂ ಮಾಡಿದ ಬೋಧನೆ ಇದೇ ತಾನೆ?" (ಕೃತಿಶ್ರೇಣಿ ಸಂ.೮, ಪು.೨೧೨-೧೩). ಮುಮುಕ್ಷುವಿಗೇ ಸಂನ್ಯಾಸ

ಸಾಧ್ಯವೆಂಬ ಭಾವನೆಯನ್ನು ಪರಬ್ರಹ್ಮ ಉಪನಿಷತ್ (೧೯) ವ್ಯಕ್ತಪಡಿಸುತ್ತದೆ. **ತಸ್ಮಾತ್ ಸರ್ವಪ್ರಯತ್ನೇನ ಮೋಕ್ಷಾಪೇಕ್ಷೀ ಭವೇದ್ಯತಿಃ**—ಯತಿಯಾದವನು ಮೋಕ್ಷವನ್ನು ಬಯಸುವವನಾಗಿದ್ದು, ಅದನ್ನು ಪಡೆಯಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು.

## ಪ್ರವೃತ್ತಿ ಮತ್ತು ನಿವೃತ್ತಿ ಮಾರ್ಗಗಳು

ಪ್ರತಿಯೊಬ್ಬ ಮಾನವನಿಗೂ ಜೀವನದಲ್ಲಿ ಸಾಧಿಸಬೇಕಾದ ಒಂದು ಆದರ್ಶವಿರಬೇಕು. ಅದು ಲೌಕಿಕವಾಗಿರಬಹುದು, ಪಾರಮಾರ್ಥಿಕವಾಗಿರಬಹುದು. ಜೀವನದ ತರಬೇತಿಯಿಂದಲೇ ಪಾರಮಾರ್ಥಿಕದಲ್ಲಿ ಶ್ರದ್ಧೆ ಉಂಟಾಗುವುದರಿಂದ ಲೌಕಿಕ ಕ್ರಿಯೆಗಳನ್ನು ತುಚ್ಛವೆಂದು ಅಲ್ಲಗಳೆಯುವಂತಿಲ್ಲ. ಹಂತ ಹಂತವಾಗಿ ವ್ಯಕ್ತಿ ಆಧ್ಯಾತ್ಮಿಕ ವಿಕಾಸವನ್ನು ಹೊಂದುತ್ತಾನೆ. ವಿಕಾಸದ ಈ ಪ್ರಕ್ರಿಯೆಯಲ್ಲಿ ಕೆಳಗಿನ ಮೆಟ್ಟಿಲುಗಳು ಕೂಡ ಆವಶ್ಯಕ. ಅವುಗಳನ್ನು ದಾಟಿದಾಕ್ಷಣ ಅವೆಲ್ಲ ನಿರರ್ಥಕವೆಂದು ಹೇಳಲಾಗುವುದಿಲ್ಲ. ಅಭ್ಯುದಯವನ್ನು ಸಾಧಿಸಲು ವ್ಯಕ್ತಿಯು ಬಾಹ್ಯ ಜಗತ್ತಿನಲ್ಲಿ ಸಾಧಿಸುವ ಎಲ್ಲ ಕ್ರಿಯೆಗಳನ್ನು ಪ್ರವೃತ್ತಿ ಮಾರ್ಗವೆಂದು ಕರೆಯಲಾಗಿದೆ. ಜಗತ್ತನ್ನು, ಅದರ ಅನುಭವಗಳನ್ನು ನಿರಾಕರಿಸದೆ ಅವುಗಳ ಬಳಕೆಯಿಂದ ಸಂಸ್ಕಾರವನ್ನು ಪಡೆಯುತ್ತ ಜೀವವು ತನ್ನ ಆಸೆ, ಆಕಾಂಕ್ಷೆಗಳನ್ನು ಪೂರೈಸಿಕೊಂಡು, ಪಕ್ವವಾಗಿ, ದಣಿದು, ಅಂತರ್ಮುಖಿಯಾಗುವುದು. ಈ ಅಂತರ್ಮುಖದ ಪಯಣವೇ ನಿವೃತ್ತಿ ಮಾರ್ಗ. ತ್ಯಾಗ, ವೈರಾಗ್ಯಗಳನ್ನು ಬಳಸಿಕೊಂಡು ಆಧ್ಯಾತ್ಮಿಕ ವಿಕಾಸವನ್ನು ಹೊಂದುವುದೇ ಈ ಮಾರ್ಗದ ಉದ್ದೇಶ. ನಿವೃತ್ತಿ ಮಾರ್ಗವನ್ನು ಅನುಸರಿಸುವವರೆಲ್ಲರೂ ಸಂನ್ಯಾಸಿಗಳಾಗಬೇಕೆಂದು ವಿಧಿಯಿಲ್ಲ. ಧಾರ್ಮಿಕ ಜೀವನವನ್ನು ನಡೆಸುತ್ತ, ಆಂತರಿಕ ತ್ಯಾಗವನ್ನು ಅಭ್ಯಾಸ ಮಾಡುವವರೆಲ್ಲ ನಿವೃತ್ತಿ ಮಾರ್ಗದಲ್ಲಿರುವವರೇ. ಸಂನ್ಯಾಸವು ಸಮಾಜದ ಉತ್ತಮ ಆದರ್ಶವಾದರೂ ಎಲ್ಲರೂ ಸಂನ್ಯಾಸಿಗಳಾಗಬೇಕು ಎಂದು ಹೇಳುವುದು ಮೂಢತನವಾಗುವುದು. ಇಂತಹ ಒಂದು ಅಭಿಪ್ರಾಯವೇ ಭಾರತೀಯ ಸಮಾಜವನ್ನು ಸಾವಿರಾರು ವರ್ಷಗಳ ಕಾಲ ಪ್ರಗತಿಯಿಂದ ವಿಮುಖವನ್ನಾಗಿಸಿತು ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ. ಬುದ್ಧನ ಭಾವನೆಗಳನ್ನು ಹಾಗೂ ಶಂಕರಾಚಾರ್ಯರ ಅದ್ವೈತವನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದುದೇ ಇದಕ್ಕೆ ಕಾರಣವೆಂದು ಅವರು ಹೇಳುತ್ತಾರೆ.

## ಉಪನಿಷತ್ತುಗಳಲ್ಲಿ ಸಂನ್ಯಾಸದ ಆದರ್ಶ

ಬಹಳ ಹಿಂದಿನಿಂದಲೂ ಸಮಾಜದಲ್ಲಿ ತ್ಯಾಗಜೀವನದ ನಿದರ್ಶನಗಳು ನಮಗೆ ದೊರೆಯುತ್ತವೆ. ವೈದಿಕ ಯುಗದಲ್ಲಿ ಋಷಿಗಳು ಆಶ್ರಮಗಳಲ್ಲಿ ವಾಸಿಸುತ್ತ ಅಂತರ್ಮುಖವಾದ ಜೀವನವನ್ನು ಪಾಲಿಸುತ್ತಿದ್ದರೂ, ಆಧ್ಯಾತ್ಮಿಕ ಸತ್ಯಗಳನ್ನು ಆವಿಷ್ಕರಿಸಿ ಮಂತ್ರದ್ರಷ್ಟಾರರಾಗಿದ್ದರೂ ಸಂನ್ಯಾಸಿಗಳಾಗಿರಲಿಲ್ಲ. ಆದರೆ ವರ್ಣಾಶ್ರಮ ವ್ಯವಸ್ಥೆಯಲ್ಲಿ ವಾನಪ್ರಸ್ಥದ ನಂತರ ಸಂನ್ಯಾಸವನ್ನು ಸ್ವೀಕರಿಸುತ್ತಿದ್ದ ಗೃಹಸ್ಥರೂ ಹಾಗೂ ಬಾಲ್ಯದಿಂದಲೇ ವೈರಾಗ್ಯವನ್ನು ಹೊಂದಿದ್ದು, ಬ್ರಹ್ಮಚರ್ಯದ ಹಂತದಿಂದಲೇ ಸಂನ್ಯಾಸವನ್ನು ಸ್ವೀಕರಿಸಿದವರೂ ಇದ್ದರು ಎಂಬುದು ತಿಳಿದುಬರುತ್ತದೆ. ಬೃಹದಾರಣ್ಯಕ ಉಪನಿಷತ್ತು (೪.೪.೨೨) ಹೇಳುತ್ತದೆ, **ಏತಮೇವ ಪ್ರವ್ರಾಜಿನೋ ಲೋಕಮಿಚ್ಛನ್ತಃ ಪ್ರವ್ರಜನ್ತಿ**—ಈ ಆತ್ಮವನ್ನೇ ಬಯಸುವವರಾಗಿ ಸಂನ್ಯಾಸಿಯಾದವರು ಮನೆಯನ್ನು ತ್ಯಾಗಮಾಡುತ್ತಾರೆ. **ಏತದ್ಧ ಸ್ಮ ವೈ ತತ್ ಪೂರ್ವೇ ವಿದ್ವಾಂಸಃ ಪ್ರಜಾಂ ನ ಕಾಮಯಂತೇ, ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾ ಅಯಂ ಲೋಕ ಇತಿ; ತೇ ಹ ಸ್ಮ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರಂತಿ** —ಈ ಆತ್ಮವನ್ನೇ, ಈ ಲೋಕವನ್ನೇ ಹೊಂದಿರುವ ನಾವು ಸಂತತಿಯಿಂದ ಏನು ಮಾಡಿಕೊಳ್ಳೋಣ? (ಎಂದು ಯೋಚಿಸುತ್ತ) ಹಿಂದಿನ ಬ್ರಹ್ಮಜ್ಞಾನಿಗಳು ಸಂತತಿಯನ್ನು ಬಯಸಲಿಲ್ಲ (ಈಗಿನ ಕಾಲದವರೂ ಹೀಗೆಯೇ ಮಾಡಬೇಕು ಎಂಬುದು ಸೂಚ್ಯಾರ್ಥ). ಅವರು ಪುತ್ರರಲ್ಲಿ, ವಿತ್ತದಲ್ಲಿ, ಲೋಕಗಳಲ್ಲಿ (ಮನುಷ್ಯಲೋಕ, ಪಿತೃಲೋಕ, ದೇವಲೋಕಗಳಲ್ಲಿ) ಇರುವ ಕಾಮನೆಯನ್ನು ಬಿಟ್ಟು ಭಿಕ್ಷಾಚರ್ಯವನ್ನು ಮಾಡುತ್ತಾರೆ. ಕೈವಲ್ಯೋಪನಿಷತ್ತು (೧.೩) ಹೇಳುತ್ತದೆ, **ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ**— ಕ್ರಿಯೆಗಳಿಂದಾಗಲಿ, ಸಂತಾನದಿಂದಾಗಲಿ, ಧನದಿಂದಾಗಲಿ ಅಮೃತತ್ವ ಪ್ರಾಪ್ತವಾಗುವುದಿಲ್ಲ. ಅದು ತ್ಯಾಗದಿಂದ ಮಾತ್ರ ಲಭಿಸುವುದು. ತ್ಯಾಗವೇ ಜೀವನದಲ್ಲಿ ಸಾಧಿಸಬೇಕಾದ ಅತ್ಯುತ್ತಮ ಆದರ್ಶವೆಂಬುದು ಸತ್ಯ. ಆದ್ದರಿಂದಲೇ ಸಂನ್ಯಾಸಿ ನಿರ್ಭೀತನಾಗಿ ಸಾವು, ನೋವುಗಳಿಗೆ ಅಂಜದೆ, ಯಾರಿಂದಲೂ ಏನನ್ನೂ ಬಯಸದೆ ಸಂಚರಿಸುತ್ತಾನೆ.

ಎಲ್ಲಿ ನೆಲಸದೊ ಜಾಗವು,-ದಿಟ
ವಲ್ಲಿ ಸೇರದು ಯೋಗವು!
ಗಗನವೇ ಮನೆ! ಹಸುರೆ ಹಾಸಿಗೆ! ಮನೆಯು ಸಾಲ್ವುದೆ ಜಾಗಿಗೆ?
ಪಾಶಗಳ ಕಡಿ! ಬಿಸುಡು, ಕಿತ್ತಡಿ!
ಹಾಡು ಸಂನ್ಯಾಸಿ-ಓಂ! ತತ್! ಸತ್! ಓಂ!

ಈ ಭಾವನೆಗಳನ್ನು ಸ್ವಾಮಿ ವಿವೇಕಾನಂದರು ತಮ್ಮ ಸಂನ್ಯಾಸಿಗೀತೆಯಲ್ಲಿ ವ್ಯಕ್ತಪಡಿಸಿದ್ದಾರೆ. ಭಾವಕ್ಕೆ ಸರಿಯಾದ ಅನುವಾದ ಶ್ರೀಕುವೆಂಪು ಅವರದು.

**ಸಂನ್ಯಾಸ ಆದರ್ಶದ ಪ್ರಸ್ತುತರೂಪ**

ಸಂಪೂರ್ಣ ಜ್ಞಾನವನ್ನು ಪಡೆದು ಅನಂತರ ಸಂನ್ಯಾಸವನ್ನು ಸ್ವೀಕರಿಸುವ ವಿದ್ವತ್ ಸಂನ್ಯಾಸಿಗಳು ಇಂದು ಅಪರೂಪವೇ. ಸಂನ್ಯಾಸ ಧರ್ಮವನ್ನು ಸ್ವೀಕರಿಸಿ, ವೈರಾಗ್ಯವನ್ನು ರೂಢಿಸಿಕೊಂಡು, ಜ್ಞಾನನಿಷ್ಠೆ ಹಾಗೂ ಭಕ್ತಿಯ ಮೂಲಕ ಸಾಧನೆಯನ್ನು ಮಾಡುತ್ತ ಚಿತ್ತಶುದ್ಧಿಯನ್ನು ಗಳಿಸಲು ಪ್ರಯತ್ನಿಸುವ ಸಾಧಕರು ಅನೇಕ. ಇವರಿಗೆ ರಕ್ಷಣೆ ನೀಡಲು, ಆದರ್ಶವನ್ನು ಕಾಪಾಡಲು ಸಂಘ, ಮಠಗಳಂತಹ ಸಂಸ್ಥೆಗಳು ಬೆಳೆದುಬಂದವು. ಸಂಸ್ಥೆಯನ್ನು ಕೋಟೆಯೊಂದಿಗೆ ಹೋಲಿಸಬಹುದು. ಹಾಗೂ ಅಂಥ ಕೋಟೆಯೊಳಗೆ ಇದ್ದು ಹೋರಾಡುವುದು ಸುಲಭ. ರಕ್ಷಾಕವಚವನ್ನು ಧರಿಸಿ ಯುದ್ಧ ಮಾಡುವಂತೆ ಇದು. ಸಹಬಾಳ್ವೆ ಹಾಗೂ ಸಹಯೋಗದಿಂದ ಸಂಸ್ಥೆಯ ಎಲ್ಲ ಸದಸ್ಯರೂ ಆದರ್ಶವನ್ನು ಪಾಲಿಸುತ್ತ, ನೀತಿ–ನಿಯಮಗಳಿಗೆ ಬದ್ಧರಾಗಿದ್ದು ಪಾರದರ್ಶಕ ಜೀವನವನ್ನು ನಡೆಸುತ್ತಾರೆ. ಇದು ಒಂಟಿಯಾಗಿ ಬಾಳುವ ಸಂನ್ಯಾಸಿಗೆ ದೊರಕದ ಸೌಲಭ್ಯ. ತ್ಯಾಗಜೀವನದಲ್ಲಿ ಅತ್ಯಂತ ಎಚ್ಚರಿಕೆ ಇರಲೇಬೇಕು. ಈ ವಿಷಯದಲ್ಲಿ ಸಂಶಯಕ್ಕೆ ಆಸ್ಪದವೇ ಇಲ್ಲ.

**ರಾಮಕೃಷ್ಣ ಸಂಘದ ವೈಶಿಷ್ಟ್ಯ**

ಸಂನ್ಯಾಸ ಸಂಪ್ರದಾಯವು ಬುದ್ಧನ ಕಾಲದಲ್ಲಿಯೇ ಪ್ರಚಲಿತವಾಗಿತ್ತು ಎಂದು ಇತಿಹಾಸ ತಿಳಿಸುತ್ತದೆ. ಶಂಕರಾಚಾರ್ಯರು ಸಂನ್ಯಾಸ ಸಂಪ್ರದಾಯವನ್ನು ಪರಿಷ್ಕರಿಸಿ, ಅದಕ್ಕೆ ಒಂದು ಸಂಸ್ಥೆಯ ರೂಪವನ್ನು ಕೊಟ್ಟರು. ನಾಲ್ಕು ಮಠಗಳನ್ನು ದೇಶದ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸುವುದರ ಮೂಲಕ ದಶನಾಮೀ ಸಂಪ್ರದಾಯವನ್ನು ಪ್ರಾರಂಭಿಸಿದರು. ದಶನಾಮೀ ಸಂಪ್ರದಾಯಕ್ಕೆ ಸೇರಿದ್ದರೆ ಮಾತ್ರ ಅದು ನಿಜವಾದ ಸಂನ್ಯಾಸ ಎನ್ನುವಷ್ಟರ ಮಟ್ಟಿಗೆ ಈ ಸಂಪ್ರದಾಯ ಬೆಳೆದುಬಂದಿದೆ. ವೈಷ್ಣವ ಸಂಪ್ರದಾಯ, ನಾಥ ಸಂಪ್ರದಾಯ, ಜಂಗಮರು, ಹೀಗೆ ಅನೇಕ ಸಂಪ್ರದಾಯಗಳು ಇದೇ ಸಂನ್ಯಾಸದ ಆದರ್ಶವನ್ನು ಅಳವಡಿಸಿಕೊಂಡಿವೆ ಹಾಗೂ ಉತ್ತಮ ಸಾಧಕರಿಗೆ ಸಂನ್ಯಾಸದ ಆದರ್ಶವನ್ನು ಕಲ್ಪಿಸಿಕೊಟ್ಟಿವೆ. ಉತ್ತರಾಖಂಡದಲ್ಲಿ ವ್ಯಾಪಕವಾಗಿರುವ ಮಠಗಳು, ಅಖಾಡಾಗಳು ಈ ಸಂನ್ಯಾಸ ಸಂಪ್ರದಾಯವನ್ನು ಕಾಪಾಡಿಕೊಂಡು ಬಂದಿವೆ. ನೂರಾರು ಸಂಪ್ರದಾಯಗಳು ಇದ್ದರೂ ಆದರ್ಶ ಮಾತ್ರ ಒಂದೇ—ವಿಷಯವಸ್ತುಗಳಲ್ಲಿ, ಇಂದ್ರಿಯಜನ್ಯ ಸುಖಗಳಲ್ಲಿ ವೈರಾಗ್ಯ ಹಾಗೂ ಆತ್ಮನಿಗ್ರಹವನ್ನು ರೂಢಿಸಿಕೊಂಡು ಶಾಸ್ತ್ರಗಳ ಅಧ್ಯಯನ, ಅನುಸಂಧಾನ, ಧ್ಯಾನಗಳಲ್ಲಿ ನಿರತನಾಗಿರುವುದು. ಹಲವು ಸುಧಾರಣೆಗಳು ಆಗಿಂದಾಗ್ಗೆ ಬಂದಿದ್ದರೂ ಮೂಲ ಉದ್ದೇಶದ ಬಗ್ಗೆ ಎಲ್ಲ ಮಠಗಳೂ ಜಾಗ್ರತವಾಗಿರುವುದು ಉಚಿತ ಹಾಗೂ ಶ್ಲಾಘನೀಯ. ಬಯಸಿದವರಿಗೆಲ್ಲ ಸಂನ್ಯಾಸವನ್ನು ಯಾರೂ ನೀಡುವುದಿಲ್ಲ. ಆಧ್ಯಾತ್ಮಿಕ ಪ್ರವೃತ್ತಿ ಇದೆಯೇ, ಸಂಸ್ಕಾರಗಳು ಪರಿಶುದ್ಧವಾಗಿದ್ದು ಸಂಸಾರದಲ್ಲಿ ನಿಜವಾದ ವೈರಾಗ್ಯವಿದೆಯೇ ಎಂದು ಪರೀಕ್ಷೆ ಮಾಡುವುದು ವಾಡಿಕೆ. ಕೆಲವೊಮ್ಮೆ ಸಣ್ಣ ಸಣ್ಣ ಮಠಗಳು ತಮ್ಮ ಹಿರಿಮೆಯನ್ನು ತೋರಿಸಿಕೊಳ್ಳಲು, ಅನೇಕ ಶಿಷ್ಯರನ್ನು ಹೊಂದಿದ್ದೇವೆ ಎಂದು ಪ್ರದರ್ಶಿಸಲು ಈ ನಿಯಮವನ್ನು ಉಲ್ಲಂಘಿಸಿ ಸಾರಾಸಾರ ವಿಚಾರ ಮಾಡದೆ ಸಂನ್ಯಾಸವನ್ನು ನೀಡುವುದೂ ಇದೆ. ಪ್ರತಿಯೊಂದು ಪದ್ಧತಿ, ಸಂಪ್ರದಾಯದಲ್ಲೂ ಇರುವ ದೋಷಗಳಂತೆ ಇದೂ ಕೂಡ. ಆದರೆ ಸಂನ್ಯಾಸಿಯಾದವನು ತನ್ನ ಆದರ್ಶದ ಬಗ್ಗೆ ಸ್ಪಷ್ಟವಾಗಿದ್ದರೆ ಇಂತಹ ನ್ಯೂನತೆಗಳು ಆತನ ಆದರ್ಶಕ್ಕೆ ಭಂಗ ತರಲಾರವು.

ಅನೇಕ ವೇಳೆ ಹೆಸರು, ಕೀರ್ತಿ, ಪಾಂಡಿತ್ಯ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ರಾಜಕೀಯದೊಂದಿಗಿನ ಒಡನಾಟ ಸಂನ್ಯಾಸ ಜೀವನಕ್ಕೆ ಮಾರಕವಾಗಿ ಪರಿಣಮಿಸಿ, ಆದರ್ಶಕ್ಕೇ, ಸಂಪ್ರದಾಯಕ್ಕೇ ಕಳಂಕ ತಂದಿವೆ. ಪತ್ರಿಕೆಗಳಲ್ಲಿ ವರದಿಯಾಗುವ ವಿಚಾರಗಳನ್ನು ಕಂಡರಂತೂ ಜನಸಾಮಾನ್ಯರು ಸಂನ್ಯಾಸಿಗಳ ಬಗ್ಗೆ ಶ್ರದ್ಧೆ ಕಳೆದುಕೊಳ್ಳುವಂತೆಯೇ ಭಾಸವಾಗುತ್ತದೆ. ಕೆಲವರು ತಪ್ಪುದಾರಿ ಹಿಡಿದರೆ ಎಲ್ಲರನ್ನೂ ಸಾರಾಸಗಟಾಗಿ ದೂಷಿಸುವುದು ತರವಲ್ಲ. ಸಂಪ್ರದಾಯವಿರುದ್ಧವಾದ ನಡವಳಿಕೆಯನ್ನು ವಿರೋಧಿಸುವುದು ಆವಶ್ಯಕವೇ ಆದರೂ ಆದರ್ಶವನ್ನೇ ನಿಂದಿಸುವುದು ತಿಳಿದವರ ರೀತಿಯಲ್ಲ. ಸಮಾಜದಲ್ಲಿ ಇರಬೇಕಾದ ಉತ್ತಮ ಆದರ್ಶಗಳ ಪ್ರತೀಕ ಸಂನ್ಯಾಸಿ. ಅವನ ಮೇಲಿರುವ ಜವಾಬ್ದಾರಿಯೂ ಬಹಳ ಗಹನವಾದದ್ದು. ತನ್ನ ಜವಾಬ್ದಾರಿಯನ್ನು ಅರಿತು, ಪವಿತ್ರವಾದ ಜೀವನ ನಡೆಸುವುದರ ಜೊತೆಗೆ ಭಗವದ್-ವ್ಯಾಕುಲತೆಯನ್ನು ಬೆಳೆಸಿಕೊಳ್ಳುವುದು ಪ್ರತಿಯೊಬ್ಬ ಸಂನ್ಯಾಸಿಯ ಕರ್ತವ್ಯ.

ಸ್ವಾಮಿ ವಿವೇಕಾನಂದರು ಸಂನ್ಯಾಸ ಸಂಪ್ರದಾಯಕ್ಕೆ ಹೊಸ ಆಯಾಮವನ್ನೇ ಕಲ್ಪಿಸಿದರು. ಅದರ ಪಾವಿತ್ರ್ಯವನ್ನು ಕಾಪಾಡಲು ಸಹಬಾಳ್ವೆಯ ನಿಯಮವುಳ್ಳ ರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದರು. ಎಲ್ಲ ಸದಸ್ಯರೂ ತ್ಯಾಗ ಮತ್ತು ಸೇವೆಯ ಆದರ್ಶವನ್ನು ರೂಢಿಸಿಕೊಂಡಿರಲೇಬೇಕು; ವಿಧೇಯತೆ, ನಿಷ್ಠೆ ಹಾಗೂ ಪಾರದರ್ಶಕ ಜೀವನಕ್ರಮವನ್ನು ಅನುಸರಿಸಬೇಕು ಎಂದು ವಿಧಿಸಿದರು. ಸಂಘವು ಆದರ್ಶದ ಮೂರ್ತರೂಪ. ಅದರಲ್ಲಿನ ಸದಸ್ಯರು ಎಷ್ಟೇ ಹಿರಿಯರಾದರೂ, ಪ್ರಮುಖರಾದರೂ, ವ್ಯಕ್ತಿಗತವಾದ ಹೆಸರು, ಕೀರ್ತಿ ಅವರಿಗೆ ಸಲ್ಲುವುದಿಲ್ಲ. ಶ್ರೀರಾಮಕೃಷ್ಣ ಪರಮಹಂಸರ ಜೀವನ–ಉಪದೇಶಗಳೇ ಎಲ್ಲ ಸದಸ್ಯರ ಕೇಂದ್ರ ಬಿಂದು. ಅವರೇ ಈ ಸಂಘದ ಮೂಲಕ ಕೆಲಸ ಮಾಡುತ್ತಿದ್ದಾರೆ ಎಂಬ ಸದೃಢ

'ಸಂನ್ಯಾಸವೆಂದರೆ ಸ್ವಾರ್ಥದ ಎಲ್ಲ ಉದ್ದೇಶಗಳನ್ನೂ ಆಸೆಗಳನ್ನೂ ತ್ಯಾಗಮಾಡುವುದು.... ಲೋಕದ ಎಲ್ಲ ಧರ್ಮಗಳೂ ಈ ಬ್ರಹ್ಮಚರ್ಯ ಹಾಗೂ ಸಂನ್ಯಾಸವನ್ನು ಬೋಧಿಸುತ್ತವೆ; ಇವುಗಳ ಧ್ಯೇಯ ಒಂದೇ—ಮನಸ್ಸನ್ನು ಇಂದ್ರಿಯ ವಿಚಾರಗಳಿಂದ ಮೇಲೆತ್ತಿ ಭಗವಂತನೆಡೆಗೆ ಹರಿಯಬಿಡುವುದು. ಮನಸ್ಸು ಭಗವಂತನಲ್ಲಿ ನೆಲೆಗೊಂಡಿತೆಂದರೆ ದಿವ್ಯಾನಂದವನ್ನು ಅನುಭವಿಸತೊಡಗುವುದು..."

( ಚೆನ್ನೈನ ''ಯುವಕರ ಹಿಂದೂ ಸಂಘ'' ದಲ್ಲಿ ಸ್ವಾಮಿ ಸುಬೋಧಾನಂದಜಿಯವರ ಸಂನ್ಯಾಸ ಮತ್ತು ಬ್ರಹ್ಮಚರ್ಯ ಎಂಬ ಭಾಷಣದಿಂದ)

ನಂಬಿಕೆ ಮತ್ತು ಭಾವನೆಯ ಮೂಲಕ ಸಂಘದ ಪಾರಮ್ಯವನ್ನು ಸಾರುತ್ತ ಬೌದ್ಧ ಸಂಘದ ಮಾದರಿಯಲ್ಲಿ ಕಾರ್ಯನಿರತವಾಗಿದೆ. ಆದರೆ ಸಂನ್ಯಾಸವೇ ಪರಮ ಮಾರ್ಗವೆಂದಾಗಲೀ, ಕೇವಲ ಮೇಲು ಜಾತಿಯವರಿಗೇ ಸಂನ್ಯಾಸ ಎಂಬ ಧೋರಣೆಯಾಗಲೀ ಇಲ್ಲಿಲ್ಲ. ಆತ್ಮಸಾಧನೆಯ ಎರಡು ಮಾರ್ಗಗಳಲ್ಲಿ ವಿರಳವೂ ಸಂಪೂರ್ಣ ತ್ಯಾಗಶೀಲವೂ ಆದ ಸಂನ್ಯಾಸದ ಆದರ್ಶ ಬದಲಾಗುತ್ತಿರುವ ಸಮಾಜದೊಂದಿಗೆ ಸಂವಾದಿಯಾಗಿ ಹೇಗೆ ಸುಧಾರಣೆಯನ್ನು ಕಂಡುಕೊಳ್ಳುತ್ತಲೇ ತನ್ನ ಅಂತಃಸತ್ವವನ್ನು ಕಾಪಾಡಿಕೊಳ್ಳುತ್ತಿದೆ, ತನ್ನ ಗುರಿಯನ್ನು ಕ್ಷಣಕಾಲವೂ ಮರೆಯದೆ ಮಾನವಸೇವೆಯ ಮೂಲಕ ಜಗತ್ತಿನ ಹಿತವನ್ನು ಹೇಗೆ ಸಾಧಿಸುತ್ತಿದೆ ಎಂಬುದು ಅಧ್ಯಯನ ಯೋಗ್ಯವಾದ ವಿಷಯ. ಈ ಆದರ್ಶವನ್ನು ಕಾಪಾಡುವುದು ಕೇವಲ ಸಂನ್ಯಾಸಿಗಳ ಕರ್ತವ್ಯವಲ್ಲ. ಗೃಹಸ್ಥರೂ ಕೂಡ ಇದರಲ್ಲಿ ಸಕ್ರಿಯವಾದ ಪಾತ್ರ ವಹಿಸಬೇಕಾಗುತ್ತದೆ. ವಿವೇಚನೆಯಿಂದ ವರ್ತಿಸುತ್ತ, ಉತ್ತಮ ಆದರ್ಶಗಳಿರುವ ಮಠ, ಸಂಪ್ರದಾಯಗಳನ್ನು ಪೋಷಿಸುವ, ರಕ್ಷಿಸುವ ಹೊಣೆ ಗೃಹಸ್ಥರದು. ದುರ್ಬಲತೆಯನ್ನು ಖಂಡಿಸುವುದರೊಂದಿಗೆ ಉತ್ತಮಿಕೆಯನ್ನು ಗುರುತಿಸಿ, ಪ್ರೋತ್ಸಾಹಿಸುವುದೂ ಆವಶ್ಯಕ. ಸಮಾಜದಲ್ಲಿನ ಆಧ್ಯಾತ್ಮಿಕ ಮೌಲ್ಯಗಳ ಸಂಕೇತವೇ ಸಂನ್ಯಾಸಿಯಾದ್ದರಿಂದ ಸಮಾಜದ ಹಿತದೃಷ್ಟಿಯಿಂದ ಪರಿವ್ರಾಜಕನ ಪವಿತ್ರತೆಗೆ ಪೂರಕವಾಗಿರುವ ಸೂಕ್ತ ವಾತಾವರಣ, ರಾಜಕೀಯ ಒತ್ತಡಗಳಿಲ್ಲದ, ಜಾತಿವೈಷಮ್ಯಗಳಿಲ್ಲದ ಸ್ವಾತಂತ್ರ್ಯ ಮಠಗಳಲ್ಲಿ ಇರಬೇಕಾದುದು ಆವಶ್ಯಕ. ಅಂತಹ ವಾತಾವರಣವು ಉತ್ತಮ ಸಮಾಜ ಹಾಗೂ ಉತ್ತಮ ಸಂನ್ಯಾಸಿಗಳಿಗೆ ತವರೂರಾಗಿ ಸಮಾಜವು ಸರ್ವಾಂಗ ಸುಂದರವಾಗಿ ಬೆಳೆಯಲು, ಬೆಳಗಲು ಸಹಕಾರಿಯಾಗುವುದು. *


ಸ್ವಾಮಿ ವಿಜ್ಞಾನಾನಂದರು

ಒಂದು ಸಲ ಬೇಲೂರು ಮಠದಲ್ಲಿ ಮಧ್ಯರಾತ್ರಿಯ ಹೊತ್ತಿಗೆ ವಿವೇಕಾನಂದರ ಕೊಠಡಿಯಿಂದ ಆರ್ತನಾದವೊಂದು ವಿಜ್ಞಾನಾನಂದರಿಗೆ ಕೇಳಿಸಿತು. ಕಾಹಿಲೆಯಾಗಿದ್ದುದರಿಂದ ಸ್ವಾಮಿಜಿಯೇ ಬಹುಶಃ ನರಳಿರಬೇಕೆಂದು ಅವರು ಯೋಚಿಸಿದರು. ನಿಶ್ಶಬ್ದವಾಗಿ ವಿವೇಕಾನಂದರ ಕೊಠಡಿಗೆ ಬಂದ ವಿಜ್ಞಾನಾನಂದರು, 'ಸ್ವಾಮಿಜಿ, ನಿಮಗೆ ಆರೋಗ್ಯವಿಲ್ಲವೆ?' ಎಂದು ವಿಚಾರಿಸಿದರು. ತಕ್ಷಣ ಎದ್ದ ವಿವೇಕಾನಂದರು, 'ಹಾ, ನಾನು ನಿನಗೆ ನಿದ್ರೆ ಬಂದಿದೆ ಎಂದುಕೊಂಡಿದ್ದೆ' ಎಂದರು. ನೀವು ಕೂಗಿಕೊಂಡಿದ್ದೇಕೆ ಎಂದು ಕೇಳಿದಾಗ, ಸ್ವಾಮಿಜಿಯೆಂದರು: 'ನೋಡು, ಜನರ ಬಡತನವನ್ನೂ ಅವರು ಪಡುತ್ತಿರುವ ಕಷ್ಟವನ್ನೂ ನೆನೆಸಿಕೊಂಡರೆ ನನಗೆ ನಿದ್ರೆಯೇ ಬರುವುದಿಲ್ಲ. ನನ್ನ ಮನಸ್ಸು ಅವಿಶ್ರಾಂತವಾದ ಯಾತನೆಯಿಂದ ತುಂಬಿಹೋಗುತ್ತದೆ. ಆದ್ದರಿಂದಲೇ ನಾನು ಶ್ರೀರಾಮಕೃಷ್ಣರನ್ನು "ನಮ್ಮ ಜನರಿಗೆ ಒಳ್ಳೆಯದಾಗಲಿ; ಅವರ ಕಷ್ಟಗಳು ಪರಿಹಾರವಾಗಲಿ" ಎಂದು ಪ್ರಾರ್ಥಿಸುತ್ತಿದ್ದೇನೆ'. ವಿಜ್ಞಾನಾನಂದರು ಆಮೇಲೆ ಅವರನ್ನು ಸಮಾಧಾನ ಪಡಿಸಿ, ನಿದ್ರೆಮಾಡುವಂತೆ ಹೇಳಿದರು. ಆ ರಾತ್ರಿ ವಿಜ್ಞಾನಾನಂದರಿಗೆ ಸ್ವಾಮಿಜಿ ತಮ್ಮ ಸ್ವದೇಶಬಾಂಧವರಿಗಾಗಿ ಅದೆಷ್ಟು ಕಳಕಳಿಯನ್ನಿಟ್ಟುಕೊಂಡಿರುವರು ಎಂಬುದನ್ನು ನೋಡಿ ಆಳವಾಗಿ ಮನಸ್ಸು ಕಲಕಿತು.

(ದೇವರೊಡನೆ ಬಾಳಿದವರು – ಭಾಗ ೧, ಪುಟ ೨೦೧)

ಒಮ್ಮೆ ಸುಬೋಧಾನಂದರು ಬಿಹಾರದ ಮಾಂಘೇರ್ ಮೂಲಕ ಪಯಣಿಸುತ್ತಿದ್ದರು. ಹಸಿವು ಆಯಾಸಗಳಿಂದ ದಣಿದುಹೋಗಿದ್ದರು. ರಸ್ತೆಯ ಪಕ್ಕದಲ್ಲಿ ಕುಳಿತು, ಕೆಲವು ದನಕಾಯುವ ಹುಡುಗರಿಗೆ ಹತ್ತಿರದ ಹೊಲಗಳಿಂದ ಸ್ವಲ್ಪ ಬಟಾಣಿ ಕಿತ್ತುಕೊಂಡು ಬರಲು ಹೇಳಿದರು. ಹೊಲದಲ್ಲಿ ಹುಡುಗರನ್ನು ನೋಡಿದ ರೈತ ಅವರನ್ನು ಅಟ್ಟಿಸಿಕೊಂಡು ಬಂದ. ಹುಡುಗರು ಸ್ವಾಮಿಗಳ ಹತ್ತಿರ ಹಿಂತಿರುಗಿ ಬಂದರು. ಸುಬೋಧಾನಂದರು ಶಾಂತರಾಗಿ ಆ ರೈತನಿಗೆ "ಸೋದರ, ನನ್ನನ್ನು ಬೇಕಾದರೆ ಶಿಕ್ಷಿಸು. ನಾನೇ ಈ ಹುಡುಗರಿಗೆ ಬಟಾಣಿ ಕಿತ್ತು ತರಲು ಹೇಳಿದ್ದು. ಇವರದೇನೂ ತಪ್ಪಿಲ್ಲ" ಎಂದರು. ಆ ರೈತನು ಸುಬೋಧಾನಂದರ ವಿನಯ, ಸರಳತೆಗಳಿಗೆ ಮಾರುಹೋಗಿ ಬೇಕಾದಷ್ಟು ಬಟಾಣಿ ಕಿತ್ತುಕೊಳ್ಳುವಂತೆ ಹೇಳಿದ. ಆದರೆ ಸುಬೋಧಾನಂದರು ಅವನ ಕೊಡುಗೆಯನ್ನು ಸ್ವೀಕರಿಸಲಿಲ್ಲ. ಅಷ್ಟರಲ್ಲಿ ಇನ್ನಾರೋ ಬಗೆಬಗೆಯ ಅಡುಗೆಗಳನ್ನು ತಂದಿತ್ತರು; ಸ್ವಾಮಿಗಳು ತಾವೂ ಊಟಮಾಡಿ, ಉಳಿದುದನ್ನು ಹುಡುಗರಿಗೂ ಹಂಚಿದರು.

(ದೇವರೊಡನೆ ಬಾಳಿದವರು –ಭಾಗ ೧ ಪುಟ ೬೩೬)


ಸ್ವಾಮಿ ಸುಬೋಧಾನಂದರು